# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 785 (1024)
2. ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ದಿನಾಂಕ : 27.12.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ಪಾಳ್ಯ ಕೈಗಾರಿಕಾ ಪ್ರದೇಶದ ಯೋಜನೆಗಾಗಿ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಪೋಲನಹಳ್ಳಿ ಗ್ರಾಮದ ಸರ್ವೆ ನಂ. 34/2 ಮತ್ತು 33/2 ರಲ್ಲಿ ಒಟ್ಟು 3 ಎಕರೆ 16½ ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡಿದ್ದು, ಭೂ ಪರಿಹಾರ ಮೊತ್ತವನ್ನು ಎಲ್ಲಾ ಖಾತೆದಾರರಿಗೂ ಪಾವತಿಸದೆ ಕೆಲವರಿಗೆ ಮಾತ್ರ ಪಾವತಿಸಿರುವ ಬಗ್ಗೆ ದೂರು | ಪಾಳ್ಯ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಪೋಲನಹಳ್ಳಿ ಗ್ರಾಮದ ಸರ್ವೆ ನಂ: 34/2 ಮತ್ತು 33/2 ರ ಒಟ್ಟು 3-16 ಎಕರೆ ಜಮೀನಿನ ಅಧಿಸೂಚಿತ ಖಾತೆದಾರರ ವಿವರ ಈ ಕೆಳಕಂಡಂತಿದೆ :-<br>1. ಶ್ರೀ ವೈ.ಸಿ. ಶ್ರೀನಿವಾಸ್ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>2. ಶ್ರೀ ವೈ.ಸಿ. ನಾರಾಯಣಸ್ವಾಮಿ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>3. ಶ್ರೀ ವೈ.ಸಿ. ರಾಮಕೃಷ್ಣ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>4. ಶ್ರೀ ವೈ.ಸಿ. ರಮೇಶ್ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>5. ಶ್ರೀ ವೈ.ಸಿ. ಸುರೇಶ್ ಲೇಟ್ ಚಿಕ್ಕಬಚ್ಚಪ್ಪ<br>6. ಶ್ರೀ ರವೀಂದ್ರ ಬಿನ್ ಲೇಟ್ ಮರಿಯಪ್ಪ<br>7. ಶ್ರೀ ಕಿರಣ್ ಕುಮಾರ್ ಬಿನ್ ಲೇಟ್ ಮರಿಯಪ್ಪ<br>ಪ್ರಸ್ತಾವಿತ ಜಮೀನಿನ ಜಂಟಿ ಖಾತೆ ಶ್ರೀ ವೈ.ಸಿ. ಶ್ರೀನಿವಾಸ್ ಬಿನ್ ಲೇಟ್ ಚಿಕ್ಕಬಚ್ಚಪ್ಪ ಮತ್ತು ಇತರರ ಹೆಸರಿನಲ್ಲಿ ನಮೂದಾಗಿದ್ದು ಈ ಪೈಕಿ ಶ್ರೀ ವೈ.ಸಿ. ಶ್ರೀನಿವಾಸ್ ಬಿನ್ ಲೇಟ್ ಚಿಕ್ಕಬಚ್ಚಪ್ಪ ಇವರು ದಿನಾಂಕ: 12.01.2021 ರಂದು ಭೂಪರಿಹಾರ ಪಾವತಿಸುವಂತೆ ಕೋರಿ ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರಿಗೆ ಮನವಿ |

| | | |
|---|---|---|
| | ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಲ್ಲಿಸಿ, ದಿನಾಂಕ: 20.03.2021 ರಂದು ನೋಟರಿ ಆಧಾರಿತ ಪ್ರಮಾಣ ಪತ್ರವನ್ನು ಸಲ್ಲಿಸಿ, ತಮಗೆ ಮೇಲ್ಕಂಡ ಜಮೀನಿನ ಪರಿಹಾರ ಪಾವತಿಸಲು ಇತರ ಖಾತೆದಾರರು ಒಪ್ಪಿರುವುದಾಗಿ ತಿಳಿಸಿರುತ್ತಾರೆ. |
| (ಆ) | ಹಾಗಿದ್ದರೆ, ಬಂದಿರುವ ದೂರುಗಳ ಸಂಖ್ಯೆ ಎಷ್ಟು; ಈ ದೂರುಗಳ ಸಂಬಂಧ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು; ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖೆಯಿಂದ ಪೋಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಮಗಳಾವುವು? (ದೂರು ಮತ್ತು ವರದಿಯೊಂದಿಗೆ ವಿವರವಾದ ಮಾಹಿತಿ ನೀಡುವುದು) | ಈ ಕೋರಿಕೆಯನ್ನು ಪರಿಗಣಿಸಿ, ಪೋಲನಹಳ್ಳಿ ಗ್ರಾಮದ ಸರ್ವೆ ನಂ: 33/2 ರ 2-26.8 ಎಕರೆ ಜಮೀನಿನ ಪರಿಹಾರ ಮೊತ್ತ ರೂ.2,92,87,500/-ಗಳನ್ನು ದಿನಾಂಕ: 26.03.2021 ರಂದು ಮತ್ತು ಸರ್ವೆ ನಂ: 34/2ರ 28 ಗುಂಟೆ ಜಮೀನಿನ ಪರಿಹಾರ ಮೊತ್ತ ರೂ.77,00,000/-ಗಳನ್ನು ದಿನಾಂಕ: 20.04.2021 ರಂದು ಆರ್.ಟಿ.ಜಿ.ಎಸ್. ಮುಖಾಂತರ ಶ್ರೀ ವೈ.ಸಿ. ಶ್ರೀನಿವಾಸ್ ಇವರಿಗೆ ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರು ಪಾವತಿಸಿರುತ್ತಾರೆ.<br><br>ತದನಂತರ, ಸದರಿ ಜಮೀನಿನ ಪರಿಹಾರ ಪಾವತಿ ಬಗ್ಗೆ ಶ್ರೀ ರಮೇಶ್ ವೈ.ಸಿ. ಬಿನ್ ಲೇಟ್ ಚಿಕ್ಕಬಚ್ಚಪ್ಪ ಮತ್ತು ಸುರೇಶ್ ವೈ.ಸಿ. ಬಿನ್ ಚಿಕ್ಕಬಚ್ಚಪ್ಪ ಇವರು ಆಕ್ಷೇಪ ವ್ಯಕ್ತಪಡಿಸಿ, ದಿನಾಂಕ 09.06.2021 ಮತ್ತು 17.06.2021 ರಂದು ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರಿಗೆ ಮನವಿ ಸಲ್ಲಿಸಿ, ತಮ್ಮ ಸಹಿಯನ್ನು ನಕಲು ಮಾಡಿ ಪರಿಹಾರವನ್ನು ಪಡೆದಿರುವುದಾಗಿ ತಿಳಿಸಿ, ತಮಗೆ ಹಾಗೂ ತಮ್ಮ ಸಹೋದರರಿಗೆ ಈ ಜಮೀನಿನಲ್ಲಿ ಸಮ ಭಾಗವಿದ್ದು ಅದರಂತೆ ಪರಿಹಾರವನ್ನು ಪಾವತಿಸುವಂತೆ ಕೋರಿರುತ್ತಾರೆ.<br><br>ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರು ದಿನಾಂಕ: 17.06.2021 ರಂದು ಕ್ಲೇಮುದಾರರು ಮತ್ತು ದೂರುದಾರರಿಗೆ ನೋಟೀಸ್ ಜಾರಿ ಮಾಡಿ, ದಿನಾಂಕ 21.06.2021 ರಂದು ವಿಚಾರಣೆ ನಡೆಸಿದ ಸಂದರ್ಭದಲ್ಲಿ ಉಭಯತ್ರರರು ರಾಜಿ ಸಂಧಾನ ಮಾಡಿಕೊಂಡಿದ್ದು, ದಿನಾಂಕ 28.06.2021 ರಂದು ಇನ್ನು ಮುಂದೆ ಏನೇ ತಂಟೆ-ತಕರಾರುಗಳು ಬಂದಲ್ಲಿ ತಾವುಗಳೇ |

| | | |
|---|---|---|
| | | ಬಗೆಹರಿಸಿಕೊಳ್ಳುವುದಾಗಿ ಹಾಗೂ ಈ ಕುರಿತು ತಕರಾರು ಅರ್ಜಿ ಸಲ್ಲಿಸುವುದಾಗಲೀ, ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದಾಗಲೀ, ದಾವೆ ದಾಖಲು ಮಾಡುವುದಾಗಲೀ ಅಥವಾ ನ್ಯಾಯಾಲಯಗಳಲ್ಲಿ ಭಾಗಾಂಶಕ್ಕೆ ದಾವೆ ಹೂಡುವುದಾಗಲೀ ಮಾಡುವುದಿಲ್ಲವೆಂದು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆಂದು ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರು ವರದಿ ಮಾಡಿರುತ್ತಾರೆ.<br><br>ಈ ಮಧ್ಯೆ ಶ್ರೀ ಕಿರಣ್ ಕುಮಾರ್ ವೈ.ಎಂ. ಇವರ ಭಾಗಕ್ಕೆ ಬರಬೇಕಾದ ಹಣವನ್ನು ಪಾವತಿಸಿರುವುದಿಲ್ಲವೆಂದು ತಿಳಿಸಿ ಶ್ರೀ ಕಿರಣ್ ಕುಮಾರ್ ವೈ.ಎಂ. ಇವರು ದಿನಾಂಕ: 13.09.2021 ರಂದು ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರಿಗೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ.<br><br>ಈ ತಕರಾರಿನ ಬಗ್ಗೆ ಇರುವ ಎಲ್ಲಾ ಖಾತೆಗಳನ್ನು Freeze ಮಾಡಲು ಹಾಗೂ ಶ್ರೀ ವೈ.ಸಿ. ಶ್ರೀನಿವಾಸ್ ಇವರ ವಿರುದ್ಧ ಮೊಕದ್ದಮೆ ದಾಖಲಿಸಲು ಕ್ರಮ ಕೈಗೊಳ್ಳುವಂತೆ ಕೋರಿ ದಿನಾಂಕ: 1406.2022ರಂದು ಚನ್ನರಾಯಪಟ್ಟಣ ಪೋಲೀಸ್ ಠಾಣೆಯಲ್ಲಿ ದೂರು ಸಂಖ್ಯೆ: 0042/2022 ರಂತೆ ಪ್ರಕರಣ ದಾಖಲಿಸಿದ್ದು, ವಿಚಾರಣೆ ಪ್ರಗತಿಯಲ್ಲಿರುವುದಾಗಿ ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರು ವರದಿ ಮಾಡಿರುತ್ತಾರೆ. |

ಸಂಖ್ಯೆ: ಸಿಐ 318 ಐಎಪಿ (ಇ) 2022

(ಡಾ॥ ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು